ಸಾಂಸ್ಕೃತಿಕ ಸ್ಥಿತ್ಯಂತರಗಳ ಮಧ್ಯೆಯೇ ಬೆಳೆಯುತ್ತಿದ್ದರು ಎನ್ನುವುದು ನಿರ್ವಿವಾದ. ಬಂಕಿಮಚಂದ್ರರ 'ಆನಂದಮಠ' ಕಾದಂಬರಿ ಮೊದಲು 'ವಂಗದರ್ಶನ' ವೆಂಬ ಪತ್ರಿಕೆಯಲ್ಲಿ ೧೮೮೦ ರಿಂದ ೧೮೮೨ ರವರೆಗೆ ಧಾರಾವಾಹಿಯಾಗಿಯೂ, ೧೮೮೨ ರಲ್ಲಿ ಪುಸ್ತಕ ರೂಪದಲ್ಲೂ ಪ್ರಕಟವಾಯಿತು. ಆನಂತರ ಇದು ಬಂಕಿಮಚಂದ್ರರ ಜೀವಿತಕಾಲದಲ್ಲೇ ೪–೫ ಬಾರಿ ಪುನರ್ಮುದ್ರಣ ಕಂಡಿತು. ಸ್ವಾಮೀಜಿಯವರೂ ಈ ಕೃತಿಯನ್ನು ಓದಿರಲಿಕ್ಕೆ ಸಾಕು.

ಇಷ್ಟೆಲ್ಲ ಹಿನ್ನೆಲೆಯಿದ್ದರೂ, ರಾಷ್ಟ್ರಾಭಿಮಾನ ಧಮನಿಧಮನಿಗಳಲ್ಲಿ ಹರಿಯುತ್ತಿದ್ದರೂ, ಸ್ವಾಮೀಜಿಯವರು ನೇರವಾಗಿ ರಾಜಕೀಯರಂಗ ಪ್ರವೇಶಿಸಲಿಲ್ಲ. ಅವರ ಗುರುದೇವರ ಮಾರ್ಗದರ್ಶನ, ಆದೇಶ ಅವರ ಹೃನ್ಮನಗಳಲ್ಲಿ ಜಾಗೃತವಾಗಿತ್ತು. ಹೀಗಾಗಿ ಬ್ರಹ್ಮದಂಡವನ್ನು ಮುಂದಿಟ್ಟುಕೊಂಡು, ಕ್ಷಾತ್ರಬಲವನ್ನು ಹಿಂದಿಟ್ಟುಕೊಂಡು ಸ್ವಾಮೀಜಿ ಮುನ್ನಡೆದರು. ತಪಶ್ಚಕ್ರವರ್ತಿಯಾಗಿ ಅಧ್ಯಾತ್ಮಕ್ಷೇತ್ರದಲ್ಲಷ್ಟೇ ಅಲ್ಲದೆ, ಮಾತೃಭೂಮಿಯ ಪುನರುತ್ಥಾನ ಕಾರ್ಯಕ್ಕಾಗಿ, ದೇಶದ ಉದ್ಧಗಲಕ್ಕೂ ರಾಷ್ಟ್ರಪ್ರೇಮದ ಕಿಡಿಹೊತ್ತಿಸಲು, ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಜ್ಞಾನ – ವಿಜ್ಞಾನದ ವಿವಿಧ ಶಾಖೆಗಳಲ್ಲಿ ಮುನ್ನಡೆಯಬೇಕಾದ ಆವಶ್ಯಕತೆಯನ್ನು ಮನಗಾಣಿಸಲು ಮಹಾದಂಡನಾಯಕರಾಗಿ ಹೊರಹೊಮ್ಮಿದರು. ಸಂನ್ಯಾಸಾಶ್ರಮದ ಪರಿಪಾಠವಾದ ಪರಿವ್ರಾಜಕ ಪರ್ಯಟನ ಇದಕ್ಕೆ ಸಹಕಾರಿಯಾಯಿತು.

೧೮೯೨ನೇ ಇಸವಿ. ಸ್ವಾಮೀಜಿಯವರು ಜಂಗಮರಾಗಿ ಅಲೆದಾಟದಲ್ಲಿದ್ದಾರೆ. ರಾಜಾಸ್ಥಾನದ ಆಳ್ವಾರ್ ಸಂಸ್ಥಾನಕ್ಕೆ ಸ್ವಾಮೀಜಿ ಹೋಗಿದ್ದಾರೆ. ಸ್ವಾಮೀಜಿಯವರ ಚುಂಬಕ ವ್ಯಕ್ತಿತ್ವದಿಂದ ಆಕರ್ಷಿತರಾದ ಅನೇಕ ಯುವಕರು ಮುಗಿಬಿದ್ದು ಬರುತ್ತಿದ್ದಾರೆ. ಅವರ ಮುಖಾರವಿಂದದಿಂದ ಮಿಂಚಿನಂತೆ ಹೊಳೆದು ಬರುತ್ತಿದ್ದ ಮಾತುಗಳಿಂದ ಆ ಯುವಕರು ಮಾರುಹೋಗಿದ್ದರು. ಆ ಚೈತನ್ಯದಾಯಕ ಮಾತುಗಳಲ್ಲಿದ್ದುದು ಈ ಸಂದೇಶ: "ಶ್ರೀಕೃಷ್ಣನ ಉಪದೇಶದಂತೆ ಯುವಕರೆಲ್ಲರೂ ಪೌರುಷವಂತರಾಗಬೇಕು; ಸಂಸ್ಕೃತವನ್ನು, ಸದ್ಗ್ರಂಥಗಳನ್ನು ಅಧ್ಯಯನ ಮಾಡಬೇಕು; ಜೊತೆಗೆ ಆಧುನಿಕ ವಿಜ್ಞಾನವನ್ನೂ ಕಲಿಯಬೇಕು; ದೇಶದ ಇತಿಹಾಸವನ್ನು ಭಾರತೀಯರೇ ಬರೆಯುವಂತಾಗಬೇಕು. ಇದೆಷ್ಟು ಮಾರ್ಮಿಕ ಮಾತು! ಸ್ವಾತಂತ್ರ್ಯ ಬಂದು ಅರ್ಧ ಶತಮಾನ ಕಳೆದಿದ್ದರೂ ಇನ್ನೂ ನಾವು ಬಹುಮಟ್ಟಿಗೆ, ಪೂರ್ವಗ್ರಹಪೀಡಿತ ಪಾಶ್ಚಿಮಾತ್ಯ ಪಂಡಿತರ ಬರವಣಿಗೆಗೇ ಜೋತುಬಿದ್ದಿರುವಂತಿದೆ. ಇದೆಂಥ ವಿಪರ್ಯಾಸ! ಇನ್ನಾದರೂ ನಾವು ಎಚ್ಚೆತ್ತುಕೊಳ್ಳಬೇಕಾಗಿದೆ. ಇದೇ ಮುಂದಿನ ರಾಷ್ಟ್ರೀಯ ಶಿಕ್ಷಣಕ್ಕೆ ಪೀಠಿಕೆಯಾಗಲಿದೆ."

ಸ್ವಾಮೀಜಿ ಇನ್ನೊಮ್ಮೆ ತಮ್ಮ ಅಭಿಮಾನಿಗಳೊಂದಿಗೆ ಮಾತನಾಡುತ್ತ, ಗ್ರಾಮಾಭಿವೃದ್ಧಿಯಿಂದ ಹೇಗೆ ದೇಶದ ಸರ್ವಾಂಗೀಣ ಉನ್ನತಿ ಸಾಧ್ಯವೆಂದು ಹೀಗೆ ವಿವರಿಸಿದರು: "ಜನಕ ಮಹಾರಾಜ ಒಂದು ಕೈಯಲ್ಲಿ ನೇಗಿಲು, ಇನ್ನೊಂದು ಕೈಯಲ್ಲಿ ವೇದ ಹಿಡಿದಿದ್ದ. ಹಿಂದಿನ ಋಷಿಗಳು ಕೃಷಿಕರೂ ಆಗಿದ್ದರು. ಈಗಿನ ನಮ್ಮ ರೈತರು ಅವಿದ್ಯಾವಂತರಾಗಿಯೇ ಬೇಸಾಯಗಾರರಾಗಿ ಇರಬೇಕಿಲ್ಲ, ವಿದ್ಯಾವಂತರೂ ಆಗಬೇಕು. ಈ ಕ್ಷೇತ್ರದಲ್ಲಿ ಚೆನ್ನಾಗಿ ಅಧ್ಯಯನ ಮಾಡಿ, ಪರಿಣತಿ ಪಡೆದು, ವೈಜ್ಞಾನಿಕ ರೀತಿವಿಧಾನಗಳನ್ನು ಅಳವಡಿಸಿಕೊಳ್ಳಬೇಕು."

ಮಹಾತ್ಮ ಗಾಂಧಿಯವರು, ಅವರೇ ಸ್ಪಷ್ಟಮಾತುಗಳಲ್ಲಿ ಹೇಳಿರುವಂತೆ, ಸ್ವಾಮಿ ವಿವೇಕಾನಂದರಿಂದ ಬಹುವಾಗಿ ಪ್ರಭಾವಿತರಾಗಿದ್ದರು. ಅವರ ಗ್ರಾಮಸ್ವರಾಜ್ಯದ ಕಲ್ಪನೆ, ಅದಕ್ಕಾಗಿ ಅವರು ರೂಪಿಸಿದ ಯೋಜನೆಗಳು, ಸ್ವಾಮೀಜಿಯವರ ಮೇಲಿನ ಹಾಗೂ ಇತರ ಮಾತುಗಳಿಂದ ಸ್ಫೂರ್ತಿಗೊಂಡು, ವಿಸ್ತೃತಗೊಂಡಿದ್ದವೆಂದು ಹೇಳಬಹುದು. ದುರದೃಷ್ಟವಶಾತ್ ಸ್ವಾತಂತ್ರ್ಯಾನಂತರ ಇವಾವುವನ್ನೂ ಪರಿಪಾಲಿಸದೆ, ಗ್ರಾಮೀಣಾಭಿವೃದ್ಧಿಯನ್ನೂ, ಶಿಕ್ಷಣಕ್ಷೇತ್ರವನ್ನೂ ಬಹುಮಟ್ಟಿಗೆ ನಾವು ಕಡೆಗಣಿಸಿದ್ದೇವೆ. ಮೇಲಾಗಿ ಬಹುಸಂಖ್ಯಾತ ನಾಡವರು ತಮ್ಮತನವನ್ನೇ, ಭಾರತದ ರಾಷ್ಟ್ರೀಯ ಜೀವಾಳವನ್ನೇ ಮರೆತುಬಿಟ್ಟಂತಿದೆ.

ಸ್ವಾಮೀಜಿಯವರು ಇಂಗ್ಲೆಂಡಿನ ಪ್ರವಾಸದಲ್ಲಿದ್ದರು. ಆ ಸಮಯದಲ್ಲಿ ಲಂಡನ್ನಿನಲ್ಲಿ ಭಾರತೀಯರ ಸಾಮಾಜಿಕ ಸಮ್ಮೇಳನವೊಂದು ನಡೆಯಿತು. ಈ ಸಮ್ಮೇಳನಕ್ಕೆ ಸ್ವಾಮೀಜಿಯವರೂ ಆಹ್ವಾನಿತರು. ಅಲ್ಲಿ ಭಾರತೀಯ ಯುವಕರಿಗೆ ಸ್ವಾಮೀಜಿಯವರು ಕೊಟ್ಟ ಕರೆ ಹೀಗಿತ್ತು: "ಯುವಕರಾದ ನೀವು ಭಾರತಕ್ಕೆ ಹಿಂದಿರುಗಿದ ಕೂಡಲೆ ಯೂರೋಪಿನ ದಿರಿಸುಗಳನ್ನೂ, ರೀತಿರಿವಾಜುಗಳನ್ನೂ ತೊರೆದುಬಿಡಬೇಕು. ಸಾಮಾನ್ಯ ಜನರೊಡನೆ ಬೆರೆತು ಅವರಿಗೆ ಸಹಾಯಮಾಡಬೇಕು. ಜಾತಿಮತದ ಸಂಕೋಲೆಗಳನ್ನು ಕಿತ್ತೆಸೆಯಬೇಕು." ಹೀಗಿತ್ತು ಅವರ ಕಳಕಳಿಯ ಮಾತುಗಳು. ಆದರೆ, ಇದು ಈಡೇರಿದೆಯೇ ಎಂದು ಭಾರತೀಯರೆಲ್ಲರೂ ಅವಲೋಕಿಸಬೇಕು. ಯೂರೋಪು ರಾಷ್ಟ್ರಗಳಿಗೆ, ಅಮೆರಿಕೆಗೆ ಹೋಗಿಬಂದ ಭಾರತೀಯರು ಇರಲಿ, ಈ ದೇಶದಲ್ಲೇ ಇರುವ, ತಾವು ಹುಟ್ಟಿದ ಊರುಕೇರಿಯ ಆಚೆಯೇ ಹೆಜ್ಜೆಯಿಡದವರೂ ಕೂಡ, ಐರೋಪ್ಯರೂ ನಾಚುವಂತೆ ಅವರ ರೀತಿನೀತಿಗಳನ್ನು ಅನುಕರಿಸುವುದು ಈಗ ಸಾಮಾನ್ಯವಾಗಿಬಿಟ್ಟಿದೆ. ಹೀಗಿರುವುದೇ ಮರ್ಯಾದೆ ನಾಗರಿಕತೆ ಎಂದು ಭಾವಿಸುವವರೇ ಬಹುಸಂಖ್ಯಾತರಾಗಿದ್ದಾರೆ – ಇದು ಭಾರತವೋ ಇಂಗ್ಲೆಂಡೋ ಎನ್ನುವಷ್ಟರಮಟ್ಟಿಗೆ !

ಭಾರತಕ್ಕೀಗ ಬೇಕಾಗಿರುವುದು ಛಾತಿವಂತರೂ, ಮೇಧಾವಿಗಳೂ ಆದ ವಿಜ್ಞಾನಿಗಳು ಎಂದು ಸ್ವಾಮೀಜಿಯವರು ಒತ್ತಿ ಒತ್ತಿ ಹೇಳುತ್ತಿದ್ದರು. ಅವರ ತಮ್ಮ ಮಹೇಂದ್ರನಾಥ ದತ್ತನು ವಕೀಲಿ ವ್ಯಾಸಂಗ ಮಾಡಲು ಲಂಡನ್ನಿಗೆ ಬಂದಾಗ, ಸ್ವಾಮೀಜಿಯವರು ಅದನ್ನು ವಿರೋಧಿಸುತ್ತಾರೆ. ಆತ ಒಬ್ಬ ಒಳ್ಳೆ ಇಲೆಕ್ಟ್ರಿಕ್ ಇಂಜಿನಿಯರ್ ಆಗಬೇಕೆಂದು ಸೂಚಿಸುತ್ತಾರೆ. ಯುವಕರು ಜೀವನದಲ್ಲಿ ಯಶಸ್ಸು ಗಳಿಸದೆ ಹೋದರೂ (ಪ್ರಾಪಂಚಿಕ ಸಂಪತ್ತನ್ನು ಗಳಿಸುವುದು), ತಾವು ಉತ್ತಮ ಬಾಳನ್ನು ಬಾಳಿದ್ದೇವೆ ಮತ್ತು ದೇಶಕ್ಕೆ ಏನಾದರೂ ಉಪಯೋಗಕರವಾದ ಜೀವನವನ್ನು ನಡೆಸಲು ಹೋರಾಡಿದ್ದೇವೆ ಎಂಬ ತೃಪ್ತಿಯಾದರೂ ಅವರಿಗೆ ಇರುತ್ತದೆ ಎಂಬುದು ಸ್ವಾಮೀಜಿಯವರ ಭಾವನೆ. ಹೀಗೆ ಯಾರೇ ಆಗಲಿ, ತಮ್ಮ ಸ್ವಂತ ಒಡಹುಟ್ಟಿದವರಾಗಲಿ, ಬಂಧುಬಳಗದವರಾಗಲಿ, ಪ್ರತಿವ್ಯಕ್ತಿಯೂ ದೇಶಕ್ಕಾಗಿ ಏನಾದರೂ ಕೊಡುಗೆ – ಅದು ಎಷ್ಟೇ

ಸಣ್ಣಮಟ್ಟದ್ದಾಗಿರಲಿ – ಕೊಡುವಂತೆ ಸ್ವಾಮೀಜಿ ಪ್ರಚೋದಿಸುತ್ತಿದ್ದರು.

ಸ್ವಾಮೀಜಿಯವರಲ್ಲಿ ಭಾರತದ ಬಗ್ಗೆ, ಇಲ್ಲಿಯ ಜನರ ಬಗ್ಗೆ ಎಷ್ಟು ಪ್ರೇಮ, ಕಳಕಳಿಯಿತ್ತೆಂಬುದು ನಮ್ಮ ಊಹೆಗೂ ನಿಲುಕದ್ದು. ಅದರ ಒಂದು ಹೊಳವು ಹೊರಹೊಮ್ಮಿರುವುದು ಹೀಗೆ : "ದೇಶಬಾಂಧವರೆ, ಮಕ್ಕಳೆ, ನಮ್ಮ ನಾಡನೌಕೆಯು ಸಂಸಾರಸಾಗರದಲ್ಲಿ ಮುಳುಗಿಹೋಗುತ್ತಿರುವ ಕೋಟಿ ಕೋಟಿ ಜೀವಿಗಳನ್ನು ಪಾರುಗಾಣಿಸಿದೆ. ಅಮೃತತ್ವದ ಕಡೆಗೆ ಹಾಯಿಸಿದೆ. ಇಂದು ಆ ಹಡಗು ಶಿಥಿಲವಾಗಿ ರಂಧ್ರಬಿದ್ದಿದೆ.... ಈ ಜನಾಂಗದ ಹಡಗಿನಲ್ಲಿ ಕುಂದುಕೊರತೆಗಳಿದ್ದರೆ, ಅದರ ಸಂತಾನರಾದ ನಾವು ಹೋಗಿ ಆ ರಂಧ್ರವನ್ನು ಮುಚ್ಚೋಣ. ನಮ್ಮ ಹೃದಯದಿಂದ ರಕ್ತ ಬಸಿದಾದರೂ ಸಂತಸದಿಂದ ಈ ಕಾರ್ಯ ಸಾಧಿಸೋಣ, ಇದರಲ್ಲಿ ಪ್ರಾಣಹೋದರೂ ಚಿಂತೆಯಿಲ್ಲ. ಆದರೆ ಈ ಮಧ್ಯೆ ನಾವು ಯಾರನ್ನೂ ನಿಂದಿಸದಿರೋಣ. ಸನಾತನ ಮಹಾನತೆಗೋಸ್ಕರ ಈ ದೇಶವನ್ನು ನಾನು ಪ್ರೀತಿಸುತ್ತೇನೆ. ನೀವೆಲ್ಲ ಭಗವಂತನ ಮಕ್ಕಳು, ಋಷಿಸಂತಾನರು ಎಂದು ಪ್ರೀತಿಸುತ್ತೇನೆ. ನಿಮ್ಮನ್ನು ನಾನು ಹೇಗೆ ತಾನೇ ಶಪಿಸಲಿ? ಎಂದಿಗೂ ಇಲ್ಲ. ನಿಮಗೆ ಸರ್ವತೋಮುಖ ಕಲ್ಯಾಣವಾಗಲಿ. ಮಕ್ಕಳೆ, ನನ್ನೆಲ್ಲ ಯೋಜನೆಗಳನ್ನು ನಿಮಗೆ ಹೇಳಲು ಬಂದಿರುವೆನು. ನೀವಿದನ್ನು ಆಲಿಸಿದರೆ, ನಿಮ್ಮೊಂದಿಗೆ ನಾನೂ ಕೈಜೋಡಿಸಲು ಸಿದ್ಧ. ನೀವಿದನ್ನು ಆಲಿಸದಿದ್ದರೂ, ನನ್ನನ್ನು ಭಾರತದಾಚೆಗೆ ನೂಕಿದರೂ, ನಾನು ಮತ್ತೆ ಬಂದು, ನಾವೆಲ್ಲ ಮುಳುಗಿಹೋಗುತ್ತಿದ್ದೇವೆ ಎಂದು ಕೂಗಿ ಹೇಳಿಯೇ ತೀರುವೆ. ನಾನು ನಿಮ್ಮೊಡನೆ ಇರಲು ಬಂದಿದ್ದೇನೆ. ಮುಳುಗಬೇಕಾದರೆ ನಾವೆಲ್ಲ ಒಟ್ಟಿಗೆ ಮುಳುಗೋಣ. ಆದರೆ ಎಂದಿಗೂ ಶಪಿಸದಿರೋಣ."

ಸ್ವಾಮೀಜಿಯವರು ತಮ್ಮ ದೇಶಬಾಂಧವರನ್ನು ಕಳಕಳಿಯಿಂದ ಸಂಬೋಧಿಸಿದ ಪರಿ ಇದು: "ದೇಶಭಕ್ತರೆ, ಸಮಾಜ ಸುಧಾರಕರೆ, ಮೊದಲು ದೇಶಭಕ್ತಿಯನ್ನು ಹೃದಯದಲ್ಲಿ ಅನುಭವಿಸಿ. ದೇಶದ ಕೋಟ್ಯಂತರ ದೇವ ಋಷಿಸಂತಾನರು ಪಶುಸಂತಾನರಾಗಿರುವರು; ಕೋಟ್ಯಂತರ ಜನರು ಉಪವಾಸದಿಂದ ನರಳುತ್ತಿರುವರು; ಅಜ್ಞಾನವು ಕಾರ್ಮೋಡದಂತೆ ಭಾರತದಾದ್ಯಂತ ಹರಡಿದೆ; ಇವೆಲ್ಲದರಿಂದ ನಿಮ್ಮ ಹೃದಯ ಹಿಂಡಿದಂತಾಗುತ್ತಿಲ್ಲವೆ? ತಲ್ಲಣಗೊಳ್ಳುತ್ತಿಲ್ಲವೆ? ನಿದ್ರೆಯನ್ನು ಕೆಡಿಸಿಲ್ಲವೆ? ಸರ್ವನಾಶಗೈಯ್ಯುವ ಈ ಸಂಕಟ ನಿಮ್ಮನ್ನಾವರಿಸಿ, ನಿಮ್ಮ ಯಶಸ್ಸು, ಕೀರ್ತಿ, ಹೆಂಡತಿ ಮಕ್ಕಳು, ಆಸ್ತಿಪಾಸ್ತಿ – ಎಲ್ಲವನ್ನೂ ಕಡೆಗಣಿಸುವಂತೆ ಆಗುತ್ತಿದೆಯೆ?" – ಇಂಥ ಸ್ಪಂದನ ದೇಶಬಾಂಧವರಲ್ಲಿ ಉಂಟಾದಾಗ ಮಾತ್ರ ಅದು 'ದೇಶಭಕ್ತರಾಗುವುದರ ಮೊದಲ ಹೆಜ್ಜೆ' ಎಂಬುದು ಸ್ವಾಮೀಜಿಯವರ ಖಚಿತ ಅಭಿಪ್ರಾಯವಾಗಿತ್ತು.

ಹೀಗೆ ಮೊದಲ ಹೆಜ್ಜೆಯಿಟ್ಟ ಭಾರತೀಯರಿಗೆ ಸ್ವಾಮೀಜಿಯವರ ಶಕ್ತಿಯ ಮಂತ್ರೋಪದೇಶ ಇದು: "ಪ್ರತಿಯೊಂದು ಮಂತ್ರದಲ್ಲಿಯೂ ಉಪನಿಷತ್ತು 'ಶಕ್ತಿ' 'ಶಕ್ತಿ' ಎಂದು ಧ್ವನಿಸುತ್ತದೆ. ಹೇ ಮಾನವ! ಎದ್ದುನಿಲ್ಲು, ಧೀರನಾಗು ಎನ್ನುತ್ತಿದೆ ಉಪನಿಷತ್ತು. ವಿಶ್ವಸಾಹಿತ್ಯದಲ್ಲಿ, ಇದೊಂದು ಮಾತ್ರ **'ಅಭೀಃ ಅಭೀಃ'** – 'ಭಯಪಡದಿರು, ಭಯ ಪಡದಿರು' ಎಂದು ಮತ್ತೆ ಮತ್ತೆ ನಗಾರಿ ಬಾರಿಸುತ್ತದೆ." ಸ್ವಾಮೀಜಿಯವರ ಇಂಥ ಸತ್ವಯುತ ವಾಕ್ಯಗಳು ಇಂದಿನ ಪೀಳಿಗೆಯವರಿಗೆ, ಅದರಲ್ಲೂ ಯುವಕರಿಗೆ ಹೆಚ್ಚು ಪ್ರಸ್ತುತ.

ಭಾರತದ ಸ್ವಾತಂತ್ರ್ಯ ಸಂಗ್ರಾಮದ (೧೮೫೭) ಸಂದರ್ಭದಲ್ಲಿ ದಕ್ಷಿಣಭಾರತದ ಅರಸೊತ್ತಿಗೆಗಳು ಒಗ್ಗಟ್ಟಾಗಿ, ಸಕ್ರಿಯವಾಗಿ ಕೈಜೋಡಿಸಿದಂತೆ ಕಾಣುವುದಿಲ್ಲ. ಇಡೀ ಭರತಖಂಡ ಐಕ್ಯತೆಯಿಂದ ಆ ಸಮಯದಲ್ಲಿ ಬ್ರಿಟಿಷರ ವಿರುದ್ಧ ತಿರುಗಿ ಬಿದ್ದಿದ್ದರೆ, ಆಗಲೇ ಅವರು ಇಲ್ಲಿಂದ ಕಾಲ್ಕೀಳಬೇಕಾಗುತ್ತಿತ್ತು. ಇದರಿಂದ ಏನೊ, ಸೂಕ್ಷ್ಮಗ್ರಾಹಿಯಾಗಿದ್ದ ಸ್ವಾಮೀಜಿಯವರು ಜನಜಾಗೃತಿಯ ಕೈಂಕರ್ಯವನ್ನು ಕೈಗೊಂಡುದು ಭಾರತದ ದಕ್ಷಿಣ ದಂಚಿನ ಕನ್ಯಾಕುಮಾರಿಯ ಶಕ್ತಿಸ್ಥಲದಿಂದ! ಪಡುವಣದಲ್ಲಿ ಸನಾತನಧರ್ಮದ ಪತಾಕೆಯನ್ನು ಹಾರಿಸಿ ಜಯಭೇರಿ ಬಾರಿಸಿ ಹಿಂದಿರುಗಿ, ಕೊಲಂಬೊದಿಂದ ಆಲ್ಮೋರದವರೆಗೆ ಸ್ವಾಮೀಜಿ ಮಿಂಚಿನಂತೆ ಸಂಚರಿಸಿದರು. ಅವರ ರಾಷ್ಟ್ರಪ್ರೇಮದ ಸಿಂಹಘರ್ಜನೆ ಭಾರತೀಯರನ್ನು ಬಡಿದೆಬ್ಬಿಸಿತು; ಸ್ವಾತಂತ್ರ್ಯಾಂದೋಲನಕ್ಕೆ ನಾಂದಿ ಹಾಡಿತು.

೧೯೪೭ ರ ಆಗಸ್ಟ್ ಹದಿನೈದರಂದು ಭಾರತ ರಾಜಕೀಯವಾಗಿ ಸ್ವಾತಂತ್ರ್ಯವನ್ನು ಹೊಂದಿತು. ಸ್ವಾತಂತ್ರ್ಯಾನಂತರ, ಸ್ವಾಮೀಜಿಯವರು ಆಶಿಸಿದಂತೆ ಭಾರತದ ಪ್ರಗತಿಯಾಗಲಿಲ್ಲ. ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಲಂಚಾವತಾರ– ಇವುಗಳು ಬೃಹದಾಕಾರ ತಾಳಿ ಉಸಿರುಗಟ್ಟಿಸುವ ವಾತಾವರಣ ನಿರ್ಮಾಣವಾಗಿದೆ. ಇದಕ್ಕೆ ನಾವು ಪುನಃ ಸ್ವಾಮಿ ವಿವೇಕಾನಂದರ ಅಮೃತವಾಣಿಗೆ ಶರಣಾಗದೆ ಗತ್ಯಂತರವಿಲ್ಲ. ನಮ್ಮ ರಾಷ್ಟ್ರ ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ, ಜಾಗತಿಕವಾಗಿ ಮೊದಲ ಸ್ಥಾನ ಪಡೆಯಬೇಕಾದರೆ, ಸ್ವಾಮೀಜಿಯವರ ಸಮಗ್ರ ಕೃತಿಗಳನ್ನು, ಕಡೆಯ ಪಕ್ಷ **'ಕೊಲಂಬೊದಿಂದ ಆಲ್ಮೋರಕೆ'** ಮತ್ತು 'ಪತ್ರಮಾಲೆ'ಯನ್ನು ಕಡ್ಡಾಯವಾಗಿ ನಮ್ಮ ಯುವಕರು ಓದುವಂತಾಗಬೇಕು, ಅದರಿಂದ ಸ್ಫೂರ್ತಿಹೊಂದಿ, ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಅನುಷ್ಠಾನಕ್ಕೆ ತರಬೇಕು.

ಅಂದು ಸ್ವಾಮೀಜಿಯವರು ತಾವು ಭರತಮಾತೆಯನ್ನು ಕಂಡ ಚಿತ್ರಣವನ್ನು ನಮ್ಮ ಮುಂದಿಟ್ಟದ್ದು ಹೀಗೆ: "ನಮ್ಮ ಈ ಭರತಖಂಡವು ಯುಗಯುಗಗಳ ನಿದ್ರೆಯಿಂದ ಎಚ್ಚರಗೊಳ್ಳುತ್ತಿದೆ. ಭಾರತಾಂಬೆಯನ್ನು ಇನ್ನಾರು ತಡೆಯುವರು? ಇನ್ನು ಆಕೆ ನಿದ್ರೆಗೆ ಎಡೆಕೊಡುವುದಿಲ್ಲ. ಯಾವ ಶಕ್ತಿಯೂ ಆಕೆಯನ್ನು ಬಗ್ಗಿಸಲಾರದು. ಕಾರಣ ಅದೋ ನೋಡಿ ! ಆ ಮಹಾಕಾಳಿ ಮತ್ತೊಮ್ಮೆ ಮೈಕೊಡವಿ ಎದ್ದು, ಉಸಿರು ತುಂಬಿಕೊಂಡು ನಿಂತಿರುವಳು. ಹೊಸ ಭಾರತ ಎದ್ದೇಳಲಿ..... ಏಳಿ ಎಚ್ಚರಗೊಳ್ಳಿ, ನಮ್ಮ ಮಾತೃಭೂಮಿ ತನ್ನ ಸನಾತನ ಸಿಂಹಾಸನದ ಮೇಲೆ ಹಿಂದೆಂದಿಗಿಂತಲೂ ಬಹುವೈಭವೋಪೇತವಾಗಿ ನವನವೋನ್ಮೇಷಶಾಲಿನಿಯಾಗಿ ವಿರಾಜಮಾನಳಾಗಿದ್ದಾಳೆ."

ಸ್ವಾಮೀಜಿಯವರ ಈ ಭವಿಷ್ಯವಾಣಿ ನನಸಾಗುವುದೆಂತು? ಅದಕ್ಕಾಗಿ ನಾವು ಮಾಡಬೇಕಾದುದೇನು, ಯೋಚಿಸಿ ನೋಡಬೇಕಲ್ಲವೇ?

# ಸಮಾಜವಾದಿಯಾಗಿ ಸ್ವಾಮಿ ವಿವೇಕಾನಂದ

ಜ.ಹೊ. ನಾರಾಯಣಸ್ವಾಮಿ

**ಸಮಾಜವಾದವೆಂದರೆ ಕೇವಲ ವರ್ಗಸಂಘರ್ಷವಲ್ಲ. ಅದಕ್ಕೆ ಬದಲಾಗಿ ಮನುಷ್ಯ ನಿರ್ಮಾಣದ ಶಿಕ್ಷಣದ ಮೂಲಕ ಮೂಡಿಬಂದ ಪ್ರಬುದ್ಧ ನಾಗರಿಕರನ್ನು ಒಳಗೊಂಡ ಸಶಕ್ತ ಮತ್ತು ಶೋಷಣೆ, ವೈಪರೀತ್ಯ ರಹಿತ ಸಮಾಜವನ್ನು ನಿರ್ಮಿಸುವುದು. ಈ ಅಂಶವನ್ನು ಪ್ರಭಾವಶಾಲಿಯಾಗಿ ಪ್ರತಿಪಾದಿಸಿರುವ ಹಾಸನ ನಗರ ನಿವಾಸಿಗಳಾದ ಲೇಖಕರು ವೃತ್ತಿಯಿಂದ ವಕೀಲರಾದರೂ, ಪ್ರವೃತ್ತಿಯಿಂದ ಉತ್ತಮ ಸಾಹಿತಿಗಳು. ಇವರು ವಿವಿಧ ವಿಷಯಗಳ ಮೇಲೆ ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ. ಇವರು ವೈಚಾರಿಕ ಪ್ರಜ್ಞೆಯುಳ್ಳವರು.**

**ಸ್ವಾ**ಮಿ ವಿವೇಕಾನಂದರು ಪ್ರಪಂಚದ ಅತ್ಯಪೂರ್ವವಾದ ಸಮಾಜವಾದಿಯಾಗಿದ್ದರು ಎಂಬುದನ್ನು ನಾವು ತುಂಬು ಗೌರವ ದಿಂದ ಹಾಗೂ ಪೂಜ್ಯ ಭಾವನೆಯಿಂದ ಗ್ರಹಿಸಬೇಕಾಗುತ್ತದೆ. ಏಕೆಂದರೆ ಅವರು ಕಂಡ ಸಮಾಜವಾದದ ಬೇರುಗಳಿರುವುದು 'ಮನುಷ್ಯ ನಿರ್ಮಾಣದಲ್ಲಿ'. ಮನುಷ್ಯನಿರ್ಮಾಣವಾಗದೆ ನಿಜವಾದ ಅರ್ಥದಲ್ಲಿ ಸಮಾಜ ಇರುವುದು ಸಾಧ್ಯವಿಲ್ಲ ಎಂಬ ಸಾರ್ವಕಾಲಿಕ ಸತ್ಯವನ್ನು ಸಾರಿದ ವಿವೇಕಾನಂದರು ಅಪೂರ್ವ ದಾರ್ಶನಿಕ ರಾಗಿದ್ದಾರೆ.


ಭಾರತದ ಸ್ವಾತಂತ್ರ್ಯಾನಂತರ ರಚಿಸಿಕೊಂಡ ಸಂವಿಧಾನದ 'ಪ್ರಸ್ತಾವನೆ'ಯಲ್ಲಿ ಮೊದಲಿಗೆ ಇದ್ದುದು 'ಭಾರತದ ಪ್ರಜೆಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ' ರಚಿಸಿಕೊಳ್ಳಲು ಎಂದು. ಅನಂತರ ೧೯೭೬ ರಲ್ಲಿ ೪೨ ನೇ ತಿದ್ದುಪಡಿಯಲ್ಲಿ ಸಾರ್ವಭೌಮ ಪದದ ನಂತರ 'ಸಮಾಜ ವಾದಿ' (Socialist), ಸರ್ವಧರ್ಮಸಮಭಾವ (Secular) – ಈ ಎರಡು ಪದಗಳನ್ನು ಸೇರಿಸಲಾಯಿತು.

ಭಾರತದ ಸಂವಿಧಾನದ ಮೂಲ ಆಶಯಗಳೆಂದರೆ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುವುದು, ವೃತ್ತಿಪರರಿಗೆ ಯೋಗ್ಯ ವಾದ ಜೀವನ ನಡೆಸುವ ವಾತಾವರಣ ನಿರ್ಮಿಸುವುದು, ಅಬಲರ ರಕ್ಷಣೆ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಶೋಷಣೆ ಗಳಿಂದ ಮುಕ್ತಿ, ಬಡತನ ನಿರ್ಮೂಲನೆ, ಅಜ್ಞಾನ, ಅನಾರೋಗ್ಯ ಹಾಗೂ ಅಸಮಾನತೆಗಳನ್ನು ತೊಡೆಯುವುದು ಇತ್ಯಾದಿ. ಆದರೆ ಸ್ವಾತಂತ್ರ್ಯ ಬಂದು ೬೪ ಸಂವತ್ಸರಗಳು ಸಂದರೂ ನಾವು ಸಂವಿ ಧಾನದ ಆಶಯಗಳನ್ನು ಯಶಸ್ವಿಯಾಗಿಸಿಕೊಳ್ಳಲು ಆಗದಿರುವುದಕ್ಕೆ ಇರುವ ಕಾರಣ ಯಾವುದು? ಆಧುನೀಕರಣದ ಭರಾಟೆಯಲ್ಲಿ ಮುಕ್ತ ಮಾರುಕಟ್ಟೆ, ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಎಂಬ ಅಂತಃಕರಣವಿರದ, ಸಂಸ್ಕೃತಿಶೂನ್ಯವಾದ ವ್ಯಾಪಾರೀಕರಣದ ಕ್ರೂರತೆಯಲ್ಲಿ ನಾವು ಸಿಲುಕಿಲ್ಲವೆ? ಮೇಲ್ನೋಟಕ್ಕೆ ಅದು ಪರಸ್ಪರ ಪೋಷಣೆಯಾಗಿ ಕಂಡರೂ ಅದರ ಅಂತರಂಗದಲ್ಲಿ ಹೆಡೆಯಾಡು ತ್ತಿರುವುದು ಶೋಷಣೆಯೇ ಅಲ್ಲವೆ? ಹಾಗಾದರೆ ಅದಕ್ಕೆ ಪರಿಹಾರ ಇಲ್ಲವೆ? ಇದೆ. ವಿವೇಕಾನಂದರ ವಿಶಿಷ್ಟವಾದ ಸಮಾಜವಾದಿ ದೃಷ್ಟಿಯನ್ನು ಅರ್ಥೈಸಿಕೊಂಡು ಅನುಮಾನಕ್ಕೆ ಆಸ್ಪದಕೊಡದೆ ಪರಸ್ಪರ ಆತ್ಮೀಯತೆಯಿಂದ ಅಳವಡಿಸಿಕೊಳ್ಳುವುದು.

'ಜೀವ – ಶಿವ' ಎನ್ನುವ ಶ್ರೀರಾಮಕೃಷ್ಣ ಪರಮಹಂಸರ ದಿವ್ಯ ದೃಷ್ಟಿಯಿಂದ ಪ್ರೇರಣೆ ಪಡೆದುಕೊಂಡ ವಿವೇಕಾನಂದರು ಧರ್ಮಕ್ಕೆ ನೀಡಿದ ದರ್ಶನ ಧ್ವನಿಯ ವ್ಯಾಖ್ಯೆ ಕೂಡ ಸಮಾಜವಾದಿ ನೆಲೆ ಯಿಂದಲೇ ಕೂಡಿದೆ.

"ಯಾರೊಬ್ಬರೂ ಯಾವುದೇ ಧರ್ಮಕ್ಕೂ ಜನಿಸಿದವರಲ್ಲ. ಪ್ರತಿಯೊಬ್ಬರ ಹೃದಯದಲ್ಲೂ ಧರ್ಮವಿದೆ. ಆದ್ದರಿಂದ ಜಗತ್ತಿನಲ್ಲಿ ಎಷ್ಟು ಜೀವಿಗಳಿದ್ದಾರೋ ಅಷ್ಟು ಧರ್ಮಗಳಿರಲಿ" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಸಾಂಸ್ಥಿಕವಾಗಿರುವ ಧರ್ಮಗಳು ಹುಸಿ ಶ್ರೇಷ್ಠತೆಯ ಹೆಸರಿನಲ್ಲಿ ಧರ್ಮದೂರವಾದ ಮತಗಳಾಗಿ ಮಾರ್ಪಟ್ಟು, ಮನುಷ್ಯ ಮನುಷ್ಯರಲ್ಲಿ ಭೇದಭಾವಗಳನ್ನು ಬಿತ್ತುತ್ತಿವೆ. ಈ ಮನುಷ್ಯನಿರ್ಮಿತ ಧರ್ಮಗಳ ಎದುರು ನಿಸರ್ಗಸತ್ಯವಾದ ವಿವೇಕಾನಂದರ ಈ ಧರ್ಮದ ವ್ಯಾಖ್ಯಾನ ಎಲ್ಲ ಅಸಮಾನತೆಗಳನ್ನೂ, ಭಿನ್ನಭಾವಗಳನ್ನೂ, ವೈರುಧ್ಯಗಳನ್ನೂ ತೊಡೆದುಹಾಕುವ ಸಾರ್ವ ಕಾಲಿಕ ಹಾಗೂ ಸರ್ವಮಾನ್ಯ ಸಿದ್ಧಾಂತವಾಗಿದೆ.

ಸ್ವಾಮಿ ವಿವೇಕಾನಂದರು ಧಾರ್ಮಿಕ ಧೀಮಂತರೆಂತೋ ಅಂತೆಯೇ ಸಾಮಾಜಿಕ ಸಂತರೂ ಹೌದು.
ಸಮಾಜವಾದಿಯಾಗಿ ಅವರು ಹೇಳಿರುವ ಮಾತು ಇದು:
"ಚಿನ್ನ ಅಥವಾ ಬೆಳ್ಳಿ ಪ್ರಮಾಣದ (Standard)
ಕಷ್ಟಗಳೆಲ್ಲಾ ನನಗೆ ತಿಳಿಯದು (ಇದರ
ವಿಚಾರವಾಗಿ ಯಾರಿಗೂ ಹೆಚ್ಚು
ತಿಳಿದಂತೆ ಕಾಣುವುದಿಲ್ಲ).
ಆದರೆ ಇಷ್ಟನ್ನು ಮಾತ್ರ
ನಾನು ನೋಡಬಲ್ಲೆ.
ಚಿನ್ನದ ಪ್ರಮಾಣವು
ಬಡವನನ್ನು ಅತಿ
ಬಡವನನ್ನಾಗಿ,
ಹಣಗಾರರನ್ನು ಹೆಚ್ಚು
ಹಣಗಾರರನ್ನಾಗಿ ಮಾಡಿದೆ.





ನಾನು ಸಮಾಜವಾದಿ (socialist), ಏಕೆಂದರೆ ಅದು ಒಂದು ಸಂಪೂರ್ಣವಾದ ಸಂಸ್ಥೆ ಎಂದು ತಿಳಿದಿರುವೆನು ಎಂದಲ್ಲ. ಆದರೆ ಒಂದು ಚೂರು ರೊಟ್ಟಿ, ಏನೂ ಇಲ್ಲದೆ ಇರುವುದಕ್ಕಿಂತ ಮೇಲು." ಈ ಮಾತಿನಲ್ಲಿ ಶೋಷಣಾಮುಕ್ತವಾದ ಸಮತಾಸಮಾಜದ ಸ್ಪಷ್ಟ ಮುಂಗಾಣ್ಕೆಯಿದೆ.

ಸ್ವಾಮಿ ವಿವೇಕಾನಂದರು ವೈರುಧ್ಯಗಳ ಭಾರತವನ್ನು ಕಂಡು ಕಣ್ಣೀರು ಸುರಿಸಿದರು. ಬಡವ – ಶ್ರೀಮಂತ, ಭೂಮಾಲೀಕ – ಭೂರಹಿತ ಕೃಷಿಕಾರ್ಮಿಕ, ಕೊಬ್ಬಿದ ಪುರೋಹಿತ – ಮೌಢ್ಯದಿಂದ ನರಳು ತ್ತಿರುವ ದೀನ ಭಕ್ತ – ಈ ಕಾರಣದಿಂದಾಗಿ ಬಡತನದ ಬೇಗೆಯಿಂದ ನರಳುತ್ತಿರುವ ಭಾರತದ ಬಹುಸಂಖ್ಯಾತ ಶೂದ್ರರನ್ನೂ, ಸ್ತ್ರೀಯರನ್ನು ಕಂಡು ಮಮ್ಮಲ ಮರುಗಿ ದರು.

"ಭರತಖಂಡದಲ್ಲಿ ದರಿದ್ರರನ್ನು, ದೀನರನ್ನು ನಾವು ಯಾವ ರೀತಿಯಿಂದ ನೋಡುತ್ತೇವೆ ಎಂದು ಆಲೋಚಿಸಿದಾಗ ನನ್ನ ಎದೆ ಕರಗಿತು. ಅವರಿಗೆ ಸಮಾಜದಲ್ಲಿ ಮೇಲೇರುವುದಕ್ಕೆ ಅವಕಾಶವಿಲ್ಲ. ಇರುವ ಕಷ್ಟದಿಂದ ತಪ್ಪಿಸಿಕೊಳ್ಳಲು ದಾರಿ ಯಿಲ್ಲ. ಭರತಖಂಡದಲ್ಲಿ ದೀನರಿಗೆ, ದರಿದ್ರರಿಗೆ, ಪಾಪಿಗಳಿಗೆ ಸ್ನೇಹಿತರಿಲ್ಲ, ಅವರಿಗೆ ಸಹಾಯಕರಿಲ್ಲ. ಅವರು ಎಷ್ಟು ಕಷ್ಟಪಟ್ಟರೂ ಮೇಲೇರರು. ಪ್ರತಿದಿನವೂ ಅವರು ಅಧಃಪಾತಾಳಕ್ಕೆ ಹೋಗುತ್ತಿರುವರು. ಕ್ರೂರ ಸಮಾಜದಿಂದ ಬೀಳುವ ಪೆಟ್ಟಿನ ಸುರಿಮಳೆಯನ್ನು ಅವರು ಅನುಭವಿಸು ವರು. ಯಾವ ಕಡೆಯಿಂದ ಪೆಟ್ಟು ಬೀಳುತ್ತಿದೆ ಎನ್ನುವುದೂ ಅವರಿಗೆ ತಿಳಿಯದು.

